ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು).—

೧. ಹೌದು

೨. ಎ.ಆರ್.ಸಿ. ಸಾಲದ ಮರುಪಾವತಿಯನ್ನು ಪುನರ್ ನಿರ್ಧರಿಸಲು (ರಿಶೆಡ್ಯೂಲಿಂಗ್) ಹಾಗೂ ಸದರಿ ಮೀನು ಮಾರಾಟ ಮಂಡಳಿಯನ್ನು ಪುನರ್ ಸಜ್ಜೀಕರಣಗೊಳಿಸುವ ವಿಷಯವು ಪರಿಶೀಲನೆಯಲ್ಲಿರುವುದರಿಂದ ಈ ಹಂತದಲ್ಲಿ ಸರಕಾರ ನೀಡಿರುವ ಗ್ಯಾರಂಟಿ ಅನ್ವಯ ಕ್ರಮ ಕೈಗೊಳ್ಳುವುದು ಅಕಾಲಿಕವೆಂದು ಪರಿಗಣಿಸಲಾಗಿದೆ.

೩. ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಲಿ ಮಂಗಳೂರು ಇವರು ಎ.ಆರ್.ಸಿ. ಸಾಲದ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ೧೯೫೯ರ ಕಾಯಿದೆ ಕಲಂ ೬೦ ರನ್ವಯ ಅರ್ಬಿಟ್ರೇಶನ್ ಕೇಸುಗಳನ್ನು ದಾಖಲು ಮಾಡಿರುತ್ತಾರೆ. ಸದರಿ ಕೇಸು ಇಲಾಖೆಯ ಪಂಚಾಯತಿ ದಾರರ ಮುಂದೆ ವಿಚಾರಣೆಗೆ ಇರುತ್ತದೆ.

## ಸಭೆಯ ಮುಂದಿಡಲಾದ ಕಾಗದ ಪತ್ರಗಳು

೧) ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿ).—ಮಾನ್ಯ ಅಧ್ಯಕ್ಷರೇ ನನ್ನ ಹೆಸರಿನ ಮುಂದಿರುವ ಈ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೧೯೬೧ನೇ ಇಸವಿಯ ಕರ್ನಾಟಕ ಭೂ ಸುಧಾರಣಾ ಶಾಸನದ ೧೪೦ನೇ ಕಲುಮಿನ ಮೇರೆಗೆ.

ಹರಳಪುರ ಹಳ್ಳಿಯ ಹರಿಹರದ ಕಿರ್ಲೋಸ್ಕರ್ ಕಂಪೆನಿಯವರು ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಹೊಂದಲು ಅನುಮತಿ ನೀಡುವ ಬಗ್ಗೆ ೧೩ನೇ ಸೆಪ್ಟೆಂಬರ್ ೧೯೮೭ ರಂದು ಹೊರಡಿಸಲಾದ ಆರ್. ಡಿ. ೧೫೯ ಎಲ್.ಆರ್.ಎಮ್ ೮೪ನೇ ಸಂಖ್ಯೆಯ ಅಧಿಸೂಚನೆಯನ್ನು

ಅ) ಬಿಜಾಪುರದ ದೇವಿ ಸಹಕಾರ ಸಂಘದವರು ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶ ಗಳಿಗಾಗಿ ಹೊಂದಲು ಅನುಮತಿ ನೀಡುವ ಬಗ್ಗೆ ದಿನಾಂಕ ೧೩ನೇ ಜೂನ್ ೧೯೮೭ ರಂದು ಹೊರಡಿಸ ಲಾದ ಆರ್. ಡಿ. ೨೦೯ ಎಲ್, ಆರ್. ಎಮ್ ೮೫ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ

೨) ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿ)ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿ) .—ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ

೧೯೫೬ನೇ ಇಸವಿಯ ಕಂಪೆನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ

ಅ) ೧೯೮೫–೮೬ನೇ ಸಾಲಿನ ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪೆನಿಯವರ ೨೩ನೇ ವಾರ್ಷಿಕ ವರದಿಯನ್ನು ಸದರಿ ಕಂಪೆನಿಯ ಕಾರ್ಯದ ಬಗ್ಗೆ ಒಂದು ಟಿಪ್ಪಣಿಯೊಂದಿಗೆ,

ಆ) ೧೯೮೪–೮೫ನೇ ಸಾಲಿನ ಕರ್ನಾಟಕ ಸೋಪು ಮತ್ತು ಮಾರ್ಜಕಗಳ ಕಂಪೆನಿಯ ಐದನೇ ವಾರ್ಷಿಕ ವರದಿಯನ್ನು ಸದರಿ ಕಂಪೆನಿಯ ಕಾರ್ಯದ ಬಗ್ಗೆ ಒಂದು ಟಿಪ್ಪಣಿಯೊಂದಿಗೆ, ಹಾಗೂ

ಇ) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ನಿಗಮಕ್ಕೆ ಸಂಬಂಧಿಸಿದ ೧೯೮೫–೮೬ನೇ ಸಾಲಿನ ವಾರ್ಷಿಕ ವರದಿ ಹಾಗೂ ೮೪–೮೫ನೇ ಸಾಲಿನ ಆಡಿಟ್ ವರದಿಯನ್ನು ಸಭೆಯ ಮುಂದಿಡುತ್ತೇನೆ.

೩) ಶ್ರೀ ಎಂ. ಪಿ, ಪ್ರಕಾಶ್ (ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿ) ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ,

೧೯೬೪ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದ ೨೦ನೇ ಕಲುಮಿನ ಮೇರೆಗೆ ಬೆಂಗಳೂರಿನ ಇಂಡಿಯನ್ ಫೊಟೋಷ್ ಲಿಮಿಟೆಡ್ ಸಂಸ್ಥೆಯು ಪ್ರದರ್ಶಿಸುವ ಚಲನಚಿತ್ರ ಪ್ರದರ್ಶನಕ್ಕೆ

ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೬ನೇ ಜನವರಿ ೧೯೮೮ರಂದು ಹೊರಡಿಸಲಾದ ಹೆಚ್‌ಡಿ ೧೫೭ ಸಿ.ಎನ್.ಎ. ೮೭ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

೪) ಶ್ರೀ ಡಿ ಬಿ. ಇನಾಂದಾರ್ (ಅಬ್ಕಾರಿ ರಾಜ್ಯ ಮಂತ್ರಿ) ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ,

೧೯೬೫ನೇ ಇಸವಿಯ ಕರ್ನಾಟಕ ಅಬ್ಕಾರಿ ಶಾಸನದ ೭೧(೪)ನೇ ಕಲುಮಿನ ಮೇರೆಗೆ,

ಅ) ೧೯೮೭ನೇ ಇಸವಿಯ ಕರ್ನಾಟಕ ಅಬ್ಕಾರಿ (ವಿಶೇಷ ನಿಬಂದನೆಗಳೊಂದಿಗೆ ಸಾರಾಯಿ ಮಾರಾಟ ಮಾಡಲು ಲೈಸನ್ಸ್‌ಗಳು (ತಿದ್ದುಪಡಿ) ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ ೯ನೇ ನವೆಂಬರ್ ೧೯೮೭ ರಂದು ಹೊರಡಿಸಲಾದ ಹೆಚ್‌ಡಿ ೨೨ ಪಿ.ಇ.ಎಸ್. ೮೭ (೧) ಕ್ರಮಾಂಕದ ಅಧಿಸೂಚನೆಯನ್ನು,

ಆ) ೧೯೮೭ನೇ ಇಸವಿಯ ಕರ್ನಾಟಕ ಅಬ್ಕಾರಿ (ಮಾದಕ ದ್ರವ್ಯಗಳ ಚಿಲ್ಲರೆ ಮಾರಾಟದ ಹಕ್ಕುಗಳ ಗುತ್ತಿಗೆ) (ತಿದ್ದುಪಡಿ) ನಿಯಮದ ಬಗ್ಗೆ ದಿನಾಂಕ ೯ನೇ ನವೆಂಬರ್ ೧೯೮೭ರಂದು ಹೊರಡಿಸಲಾದ ಹೆಚ್‌ಡಿ ೨೨ ಪಿ.ಇ.ಎಸ್ ೮೭ (೨)ನೇ ಕ್ರಮಾಂಕದ ಅಧಿಸೂಚನೆಯನ್ನು,

ಇ) ೧೯೮೭ನೇ ಇಸವಿಯ ಕರ್ನಾಟಕ ಅಬ್ಕಾರಿ (ಭಾರತೀಯ ಮತ್ತು ವಿದೇಶ ಮಾದಕ ದ್ರವ್ಯಗಳ ಮಾರಾಟ) (ತಿದ್ದುಪಡಿ) ನಿಯಮದ ಬಗ್ಗೆ ದಿನಾಂಕ ೯ನೇ ನವೆಂಬರ್ ೧೯೮೭ ರಂದು ಹೊರಡಿಸಲಾದ ಹೆಚ್‌ಡಿ ೨೨ ಪಿ. ಇ. ಎಸ್. ೮೭ (೩)ನೇ ಕ್ರಮಾಂಕದ ಅಧಿಸೂಚನೆಯನ್ನು,

ಈ) ೧೯೮೭ನೇ ಇಸವಿಯ ಕರ್ನಾಟಕ ಅಬ್ಕಾರಿ (ಮಾದಕ ದ್ರವ್ಯದ ಬಾಟ್ಲಿಂಗ್) (ತಿದ್ದುಪಡಿ) ನಿಯಮದ ಬಗ್ಗೆ ದಿನಾಂಕ ೯ನೇ ನವೆಂಬರ್ ೧೯೮೭ರಂದು ಹೊರಡಿಸಲಾದ ಹೆಚ್‌ಡಿ ೨೨ (ಪಿ.ಇ.ಎಸ್. ೮೭ (೪)ನೇ ಕ್ರಮಾಂಕದ ಅಧಿಸೂಚನೆಯನ್ನು,

ಉ) ೧೯೮೭ನೇ ಇಸವಿಯ ಕರ್ನಾಟಕ ಅಬ್ಕಾರಿ ಸುಂಕಗಳು (ತಿದ್ದುಪಡಿ) ನಿಯಮಕ್ಕೆ ಸಂಬಂಧಿಸಿದಂತೆ ೨೬ನೇ ಅಕ್ಟೋಬರ್ ೧೯೮೭ರಂದು ಹೊರಡಿಸಲಾದ ಹೆಚ್‌ಡಿ ೨೧೦ ಇ.ಡಿ.ಸಿ ೮೫ನೇ ಕ್ರಮಾಂಕದ ಅಧಿಸೂಚನೆಯನ್ನು,

ಊ) ೧೯೮೭ನೇ ಇಸವಿಯ ಕರ್ನಾಟಕ ಅಬ್ಕಾರಿ (ಸಾರಾಯಿ ಭಟ್ಟಿ) (ತಿದ್ದುಪಡಿ) ನಿಯಮಕ್ಕೆ ಸಂಬಂಧಿಸಿದಂತೆ ೧೦ನೇ ನವೆಂಬರ್ ೧೯೮೭ರಂದು ಹೊರಡಿಸಲಾದ ಹೆಚ್‌ಡಿ ೧೭ ಪಿ.ಇ.ಎಸ್. ೮೭ನೇ ಕ್ರಮಾಂಕದ ಅಧಿಸೂಚನೆಯನ್ನು

ಋ) ೧೯೮೭ನೇ ಇಸವಿಯ ಕರ್ನಾಟಕ ಅಬ್ಕಾರಿ (ಅಬ್ಕಾರಿ ಸುಂಕಗಳು) (ತಿದ್ದುಪಡಿ) ನಿಯಮಕ್ಕೆ ಸಂಬಂಧಿಸಿದಂತೆ ೧೭ನೇ ಡಿಸೆಂಬರ್ ೧೯೮೭ರಂದು ಹೊರಡಿಸಿದ ಹೆಚ್‌ಡಿ ೧೦ ಪಿ.ಇ.ಎಸ್. ೮೭ನೇ ಕ್ರಮಾಂಕದ ಅಧಿಸೂಚನೆಯನ್ನೂ, ಹಾಗೂ

ಋೂ) ೧೯೮೭ನೇ ಇಸವಿಯ ಕರ್ನಾಟಕ ಅಬ್ಕಾರಿ (ಸಂಸ್ಕರಿಸಿದ ಸ್ಪಿರಿಟ್) (ತಿದ್ದುಪಡಿ) ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ ೨೬ನೇ ಡಿಸೆಂಬರ್ ೧೯೮೭ ರಂದು ಹೊರಡಿಸಲಾದ ಹೆಚ್‌ಡಿ ೨೧ (ಪಿ.ಇ ಎಸ್. ೮೭ (೨)ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

೫. ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿ) ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಅಧ್ಯಕ್ಷರೇ

೧೯೬೫ನೇ ಇಸವಿಯ ಕರ್ನಾಟಕ ರಾಜ್ಯ ಶಾಸನದ ೧೦೫ನೇ ಕಲುಮಿನ ಮೇರೆಗೆ,—

ಅ) ೧೯೮೭ನೇ ಸಾಲಿನ ಕರ್ನಾಟಕ ಅರಣ್ಯ (ತಿದ್ದುಪಡಿ) ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ ೨೬ನೇ ಸೆಪ್ಟೆಂಬರ್ ೧೯೮೭ರಂದು ಹೊರಡಿಸಲಾದ ಎ.ಹೆಚ್.ಎಫ್.ಎಫ್.ಡಿ. ೨೭ ಎಫ್.ಎಫ್.ಐ ೮೪ನೇ ಕ್ರಮಾಂಕದ ಅಧಿಸೂಚನೆಯನ್ನೂ, ಹಾಗೂ

ಆ) ೧೯೫೬ನೇ ಇಸವಿಯ ಕಂಪೆನಿಗಳ ಶಾಸನದ ೬೧ (ಎ)ನೇ ಕಲುಮಿನ ಮೇರೆಗೆ ಕರ್ನಾಟಕ ಅರಣ್ಯ ನೆಡುತೋಪುಗಳ ನಿಗಮದಪರ ೧೯೮೫–೮೬ನೇ ಸಾಲಿಗೆ ಸಂಬಂಧಿಸಿದಂತೆ ೧೫ನೇ ವಾರ್ಷಿಕ ವರದಿಯನ್ನು ಮುಂದಿಡುತ್ತೇನೆ.